ಬೆಂಗಳೂರು ನಗರದಲ್ಲಿ ಅನಾಥ ಬೀದಿ ಮಕ್ಕಳು

4883 - ಶ್ರೀ ಎ. ನಾರಾಯಣ ಸ್ವಾಮಿ (ಆನೇಕಲ್) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿ ಅನಾಥ ಬೀದಿ ಮಕ್ಕಳಿರುವುದು ನಿಜವೇ? ಎಷ್ಟು ಜನ ಬೀದಿ ಮಕ್ಕಳಿದ್ದಾರೆ?*

ಆ) *ಬೀದಿ ಮಕ್ಕಳ ಹಾವಳಿ ನಿವಾರಣೆಗೆ ಸರ್ಕಾರದ ಮಾರ್ಗೋಪಾಯಗಳೇನು?*

ಇ) *ಬೀದಿ ಮಕ್ಕಳ ರಕ್ಷಣೆಗೆ ಪರಿಹಾರ ಕೇಂದ್ರವೇನಾದರೂ ರಾಜ್ಯದಲ್ಲಿವೆಯೇ?*

ಈ) *ಈ ದಿಸೆಯಲ್ಲಿ ಸ್ಥಳೀಯ ಸೇವಾ ಸಂಸ್ಥೆಗಳ ನೆರವು ಪಡೆಯಲು ಸರ್ಕಾರ ನಿರ್ಧರಿಸಿದೆಯೇ?*

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಹೌದು. ಸುಮಾರು 90,000 ರಿಂದ 1.00 ಲಕ್ಷ.

ಆ) ಕೇಂದ್ರ ಸರ್ಕಾರವು ಬೀದಿ ಮಕ್ಕಳ ಕಲ್ಯಾಣಕ್ಕಾಗಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಅಲ್ಲದೆ ಬಾಲ ಕಾಯ್ದೆ ಕೆಳಗೆ ನಿರ್ಗತಿಕ ಹಾಗೂ ನಿರ್ಲಕ್ಷಿತ ಮಕ್ಕಳ ರಕ್ಷಣೆ ಪಾಲನೆ ಪೋಷಣೆಗಾಗಿ ಕ್ರಮಕೈಗೊಳ್ಳಲಾಗುತ್ತಿದೆ.

ಇ) ರಾಜ್ಯದಲ್ಲಿ ಪರಿಹಾರ ಕೇಂದ್ರಗಳಿರುವುದಿಲ್ಲ. ಕೆಲವು ಸ್ವಯಂ ಸೇವಾ ಸಂಸ್ಥೆಗಳು ಈ ಮಕ್ಕಳಿಗಾಗಿ ರಾತ್ರಿಹಗಲು ತಂಗುದಾಣಗಳನ್ನು ನಡೆಸುತ್ತದೆ.

ಈ) ಹೌದು.

ಆನೇಕಲ್ ಕ್ಷೇತ್ರದ ಗ್ರಾಮಗಳಿಗೆ ಸಾರಿಗೆ ಸಂಪರ್ಕ ಕಲ್ಪಿಸುವುದು

4884 - ಶ್ರೀ ನಾರಾಯಣ ಸ್ವಾಮಿ ಎ. (ಆನೇಕಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆನೇಕಲ್ ಕ್ಷೇತ್ರದಲ್ಲಿ ಸಾರಿಗೆ ಸಂಪರ್ಕವಿಲ್ಲದ ಗ್ರಾಮಗಳ ಪಟ್ಟಿ ಮತ್ತು ಆ ಗ್ರಾಮಗಳು ಸಾರಿಗೆ ಸಂಪರ್ಕ ಪಡೆಯಲು ಇರುವ ದೂರವೆಷ್ಟು?*

ಆ) *ಕೆಲವು ಗ್ರಾಮಗಳಿಂದ ಸಾರಿಗೆ ಸಂಪರ್ಕದ ಸೌಲಭ್ಯಕ್ಕಾಗಿ ಮನವಿ ಪತ್ರಗಳು ಬಂದಿದೆಯೇ?*

ಇ) *ಈ ಗ್ರಾಮಗಳಿಗೆ ಸಾರಿಗೆ ಸಂಪರ್ಕಕ್ಕಾಗಿ ಸರ್ಕಾರ ತೆಗೆದುಕೊಂಡ ಕ್ರಮವೇನು?*

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :

ಅ) ಆನೇಕಲ್ ಕ್ಷೇತ್ರದಲ್ಲಿ 41 ಗ್ರಾಮಗಳಿಗೆ ಸಾರಿಗೆ ಸೌಲಭ್ಯವಿರುವುದಿಲ್ಲ (ಸದರಿ ಗ್ರಾಮಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಒದಗಿಸಲಾಗಿದೆ).